ಪಿ.ಡಬ್ಲೂಃ 2

<u>ದಿನಾಂಕಃ 10.08.2026 ರಂದು ಸಾಕ್ಷಿಯನ್ನು ಕರೆಯಿಸಲಾಯಿತು ಮತ್ತು ಪ್ರಮಾಣ ವಚನ ಭೋದಿಸಲಾಯಿತು</u>

<u>ಪಾಟೀ ಸವಾಲು:- ಪ್ರತಿವಾದಿ ನಂ.3 ರ ಪರವಾಗಿ Miss. NMR, ವಕೀಲರಿಂದ</u>

1. 3 ನೇ ಪ್ರತಿವಾದಿ ಅಸಲು ದಾವೆ ಸಂಖ್ಯೆ 167/11 ರಂತೆ 1 ನೇ ಪ್ರತಿವಾದಿ ಮೇಲೆ ದಾವೆ ದಾಖಲಿಸಿದ್ದರು ಎಂದರೆ ಸರಿ. ದಾವಾ ಆಸ್ತಿಯ ಕಬ್ಜೆಯನ್ನು ಸದರಿ ದಾವೆಯ ಆದೇಶದಂತೆ 3 ನೇ ಪ್ರತಿವಾದಿ ಪಡೆದುಕೊಂಡಿರುತ್ತಾನೆ ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ಗೋತ್ತಿಲ್ಲ ಎಂದು ನುಡಿಯುತ್ತಾರೆ. 3 ನೇ ಪ್ರತಿವಾದಿಯು ದಾವಾ ಆಸ್ತಿಯ ಕಬ್ಜೆ ಹೊಂದಿರುತ್ತಾನೆ ಎಂದರೆ ಸರಿಯಲ್ಲ.

2. ದಾವಾ ಆಸ್ತಿ ಸಂಖ್ಯೆ 1 ಪ್ರತಿವಾದಿ 3 ರವರ ಕಬ್ಜೆಯಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಅಸಲು ದಾವೆ ಸಂಖ್ಯೆ 167/2011 ರಂತೆ ನ್ಯಾಯಾಲಯದ ಆದೇಶದಂತೆ 3 ನೇ ಪ್ರತಿವಾದಿಯು ದಾವಾ ಆಸ್ತಿ ಸಂಖ್ಯೆ 1 ರ ಸ್ವಾಧೀನ ಹೊಂದಿರುತ್ತಾನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಆದೇಶದ ದಿನಾಂಕದಿಂದ 3 ನೇ ಪ್ರತಿವಾದಿಯೇ ದಾವಾ ಆಸ್ತಿ ಸಂಖ್ಯೆ 1 ರಲ್ಲಿ ಸ್ವಾಧೀನ ವಹಿವಾಟು ಮಾಡುತ್ತಾ ಬಂದಿರುತ್ತಾನೆ ಎಂದರೆ ಸರಿಯಲ್ಲ. ವಾದಿಯರು ನಮ್ಮ ಊರಿನವರು ಎಂದರೆ ಸರಿ. ವಾದಿಯರು ನಮ್ಮ ಊರಿನವರಾಗಿರುವ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ</u>

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓದಿ. ಹೇ. ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಲಕ್ಷ್ಮೇಶ್ವರ.